**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>**

**<u>SC.104/2025</u>**

ಸಾಕ್ಷಿದಾರರ ಹೆಸರು : ಪರಿಮಳ

ಗಂಡನ ಹೆಸರು : ಜಯಪ್ಪ

ವಯಸ್ಸು : 25 ವರ್ಷ

ಉದ್ಯೋಗ : ಕೂಲಿ

ವಾಸ ಸ್ಥಳ : ಬುಳ್ಳಾಪುರ, ದಾವಣಗೆರೆ ತಾಲ್ಲೂಕು

ಪಿ.ಡಬ್ಲ್ಯೂ 5

ಸಿ.ಡಬ್ಲ್ಯೂ 10

ದಿ: 27-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>**

1. ವಿಸಿಯಲ್ಲಿ ಕಾಣುತ್ತಿರುವ ಆರೋಪಿಯ ನನ್ನ ಗಂಡ ಇರುತ್ತಾರೆ. ಮೃತ ಶಿವುಕುಮಾರವರ ಪರಿಚಯ ನನಗೆ ಇಲ್ಲ. ಅವರು ಹೇಗೆ ಮೃತ ಪಟ್ಟಿರುತ್ತಾರೆ ಅಂತ ನನಗೆ ಗೊತ್ತಿಲ್ಲ. ಅವರ ಸಾವಿಗೆ ಯಾರು ಕಾರಣ ಅಂತ ನನಗೆ ಗೊತ್ತಿಲ್ಲ. ಅವರ ಸಾವಿನ ಬಗ್ಗೆ ನಾನು ಹೇಳಿಕೆ ಕೊಟ್ಟಿಲ್ಲ. ಮೃತ ಶಿವುಕುಮಾರರವರು ನಮ್ಮ ಮನೆಗೆ ಎಂದಿಗೂ ಬರುತ್ತಿರಲಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ಕೊಡುತ್ತಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸರ್ಕಾರಿ

ಅಭಿಯೋಜಕರು ಕೋರಿರುತ್ತಾರೆ. ವಾದ ಕೇಳಿ ದಾಖಲೆ ಪರಿಶೀಲಿಸಿ ಅನುಮತಿ ಕೊಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**:

2. ಮೃತ ಶಿವುಕುಮಾರರವರನ್ನು ನನ್ನ ಗಂಡ ಮನೆಯಲ್ಲಿ ಇಲ್ಲದ ಸಮಯದಲ್ಲಿ ಕರೆಸಿಕೊಳ್ಳುತ್ತಿದ್ದೆ ಅಂದರೆ ಸುಳ್ಳು. ಮೃತ ಶಿವುಕುಮಾರರವರು ನಮ್ಮ ಮನೆಯಲ್ಲಿ ನನ್ನೊಂದಿಗೆ ಇದ್ದಿದ್ದನ್ನು ನನ್ನ ಗಂಡ ನೋಡಿ ಮೃತನಿಗೆ ಹಲ್ಲೆ ಮಾಡಿದ ಮತ್ತು ಶಿವುಕುಮಾರರವರು ಓಡಿ ಹೋಗುತ್ತಿದ್ದು, ಅವರನ್ನು ಹಿಂಬಾಲಿಸಿಕೊಂಡು ಹೋದರು ಅಂದರೆ ಸರಿಯಲ್ಲ. ಆನಂತರ ನನ್ನ ಗಂಡ ರಾತ್ರಿ 11.00 ಗಂಟೆಗೆ ವಾಪಸ್ಸು ಬಂದಾಗ ನಾನು ಏನಾಯಿತು ಅಂತ ಕೇಳಿದಾಗ, ನನ್ನ ಗಂಡ ಮೃತ ಶಿವುಕುಮಾರರವರನ್ನು ಹೊಡೆದು ಸಾಯಿಸಿದ್ದೇನೆ ಅಂತ ಹೇಳಿದರು ಅಂದರೆ ಸರಿಯಲ್ಲ. ನಂತರ ನಾನು ಹೋಗಿ ಶಿವುಕುಮಾರರವರ ಹೆಣವನ್ನು ನೋಡಿದೆ ಅಂದರೆ ಸರಿಯಲ್ಲ. ಶಿವುಕುಮಾರರವರ ಸಾವಿಗೆ ನನ್ನ ಗಂಡನೇ ಕಾರಣ ಅಂದರೆ ಸರಿಯಲ್ಲ. ನನ್ನೊಂದಿಗೆ ಮೃತ ಶಿವುಕುಮಾರರವರು ಒಡನಾಟ ಇಟ್ಟುಕೊಂಡಿದ್ದಕ್ಕೆ ನನ್ನ ಗಂಡ ಶಿವುಕುಮಾರರವರನ್ನು ಸಾಯಿಸಿದ್ದಾರೆ ಅಂದರೆ ಸರಿಯಲ್ಲ. ಆ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-14 ಅಂತ ಗುರುತಿಸಲಾಯಿತು. ಆರೋಪಿ ನನ್ನ ಗಂಡ ಆಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ**:

ವಕೀಲರು ಪಾಟೀ ಸವಾಲು ಏನೂ ಇಲ್ಲ ಅಂತ ನುಡಿದಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.